**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 74/2019**

ದಿನಾಂಕಃ 05.10.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಸಾ.- 11 ಅ.ಸಾ.- 07

| | | |
|---|---|---|
| ಹೆಸರು | ಃ | ಅರುಣ್ ಕುಮಾರ್ |
| ತಂದೆಯ ಹೆಸರು | ಃ | ದೇವರಾಜು |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಆಲೂರು, ಮಾಗಡಿ ತಾಲೂಕು. |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿ ದಿನಾಂಕಃ 19.03.2019 ರ ಕೃತ್ಯ ಸ್ಥಳದ ಪಂಚನಾಮೆಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ. 6 ಎಂದು ಮತ್ತು ಸಾಕ್ಷಿ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ದಿನಾಂಕಃ 19.03.2019 ರ ಮದ್ಯಾಹ್ನ ಸುಮಾರು 11 ರಿಂದ 12 ಗಂಟೆ ಸಮಯದಲ್ಲಿ ಮೈಲನಹಳ್ಳಿಯ ಮಹಿಳಾ ಸಹಕಾರಿ ಬ್ಯಾಂಕ್ ನ ಸಮೀಪ ಮೇಲೆ ಹೇಳಿದ ಸಹಿ ಹಾಕಿರುತ್ತೇನೆ. ನ್ಯಾಯಾಲಯದಲ್ಲಿ ಕುಳಿತಿರುವ ಆರೋಪಿ ಜೊತೆಗೆ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಸ್ಥಳದಲ್ಲಿ ಸುಟ್ಟು ಹೋಗಿದ್ದ ಮೃತ ದೇಹದ ಜಾಗ ಕುರಿತು ಮಹಜರ್ ಮಾಡಲು ಬಂದಿರುವುದಾಗಿ ಪೊಲೀಸರು ಹೇಳಿದರು. ಜಾಗದಲ್ಲಿ ಗುರುತು ಮಾಡಿ

ಪೋಟೋಗಳನ್ನು ಪೊಲೀಸರು ತೆಗೆದಿರುತ್ತಾರೆ. ಪೊಲೀಸರು ಬರೆದಿದ್ದಕ್ಕೆ ನಾನು ಸಹಿ ಹಾಕಿರುತ್ತೇನೆ. ಬೇರೆಯವರು ಕೂಡ ಸಹಿ ಹಾಕಿರುತ್ತಾರೆ. ಸ್ಥಳದಲ್ಲಿ ತೆಗೆದ ಎರಡು ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು,ಅವುಗಳನ್ನು ನಿ.ಪಿ. 7 ಮತ್ತು 8 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಎಂ.ಪಿ. ವಕೀಲರಿಂದ ಆರೋಪಿ ಪರಃ-</u>**

ಜಾಗಕ್ಕೆ ಬರಲು ಪೊಲೀಸರು ನನಗೆ ಲಿಖಿತ ನೋಟೀಸ್ ಕೊಟ್ಟಿದ್ದರು. ನಾನು ವಾಸ ಮಾಡುವ ಜಾಗ ಮತ್ತು ಪಂಚನಾಮೆ ಜಾಗ ಸುಮಾರು ಅರ್ಧ ಕಿ. ಮೀಟರ್ ಆಗುತ್ತದೆ. ನಾನು ಪಂಚಾಯತಿ ಸದಸ್ಯ ಇರುತ್ತೇನೆ. ನಾನು ಜಾಗಕ್ಕೆ ಬರುವಷ್ಟರಲ್ಲಿ ಪೊಲೀಸರು ಮತ್ತು ಜನ ಆಗಲೇ ಇದ್ದರು. ಪಂಚನಾಮೆ ಬರೆದ ಪೊಲೀಸರು ಯಾರು ಅಂದರೆ ಪೇದೆ ಅಥವಾ ಯಾರು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಪಂಚನಾಮೆ ಓದಿ ಸಹಿ ಹಾಕಿರುತ್ತೇನೆ. ನನ್ನದು ಎನ್ನುವ ಸಹಿ ಕೆಳಗೆ ನನ್ನ ತಂದೆಯ ಹೆಸರು, ವಯಸ್ಸು ಮತ್ತು ವಿಳಾಸ ಬರೆದಿಲ್ಲ ಎನ್ನುವುದು ಸರಿಯಿದೆ. ನಾನು ಉಪಾಧ್ಯಕ್ಷ ಆಗಿದ್ದರಿಂದ ಪೊಲೀಸರು ನನಗೆ ಬೇರೆ ಪ್ರಕರಣಗಳಲ್ಲಿ ಕೂಡ ಕರೆಸುತ್ತಿದ್ದರು ಎನ್ನುವುದು ಸರಿಯಿದೆ. ನಾನು ಪೊಲೀಸರಿಗೆ ಬೇಕಾದ ವ್ಯಕ್ತಿ ಆಗಿದ್ದು, ಸ್ಥಳಕ್ಕೆ ಹೋಗಿರದೇ

ಠಾಣೆಯಲ್ಲಿಯೇ ಸಹಿ ಮಾಡಿದ್ದು, ಪೊಲೀಸರು ಹೇಳಿದಂತೆ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

( ರಾಘವೇಂದ್ರ.ಜಿ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.